ಅಲ್ಲೇ ಮುಳುಗು ಹಾಕ್ತಾರೆ, ಅದೇ ನೀರನ್ನ ಪವಿತ್ರ ಅಂತ ತಂಬಿಗೆಯಲ್ಲಿ ತುಂಬಿ ಮನೆಗೂ ಒಯ್ತಾರೆ. ಧರ್ಮಕ್ಕೆ ಅಪಚಾರ ಮಾಡ್ತಾರೆ. ವಿಜ್ಞಾನಕ್ಕೆ ಅಪಚಾರ ಮಾಡ್ತಾರೆ. ಶುಚಿತ್ವಕ್ಕೆ ಅಪಚಾರ ಮಾಡ್ತಾರೆ" – ಇದು ಗಾಂಧೀಜಿ ಆವಾಗ್ಲೇ ಹೇಳಿದ ಮಾತು. 106 ವರ್ಷಗಳ ಹಿಂದೆ ಅಂದರೆ – ಆಗ ಜಲಮಾಲಿನ್ಯದ ಪರಿಕಲ್ಪನೆ ಇರಲಿಲ್ಲ; ಕಾರ್ಖಾನೆಗಳು ಇರಲಿಲ್ಲ. ನಗರದ ಕಕ್ಕಸನ್ನು ದೂರ ಒಯ್ದು ನದಿಗೆ ಬಿಡುವಂಥ ಒಳಚರಂಡಿಗಳೂ ಇರಲಿಲ್ಲ.

**ಅವಳು:** ಅದಕ್ಕೇ ಗಾಂಧೀಜಿ ನಮಗೆ ಮುಖ್ಯ ಆಗ್ತಾರೆ. ಇವೊತ್ತು ನಾವು ಏನು ಕೆಡುಕು ಮಾಡ್ತೀವೊ, ನಾಳೆ ನಮಗೆ ಶಾಪ ಆಗ್ತದೆ ಅನ್ನೋದು ಗಾಂಧೀಜಿ ನಂಬಿಕೆ ಆಗಿತ್ತು. ಅದಕ್ಕೇ ನಾವು ಅವರಿಗೆ 'ಮಹಾತ್ಮಾ' ಅನ್ನೋದು. ಈಗ ನೋಡಿ: ನಮ್ಮ ದೇಶದಲ್ಲಿ ಜಲಮಾಲಿನ್ಯ, ವಾಯುಮಾಲಿನ್ಯ ಅನ್ನೋ ಪದ ಸಾಕಷ್ಟು ಬಳಕೇಲಿ ಇದೆ. ಅಷ್ಟೇ ಅಲ್ಲ, ಮಾಲಿನ್ಯ ಮಾಡಬಾರದೂ ಅಂತ ಕಾಯಿದೆಗಳೇ ಜಾರಿಗೆ ಬಂದು 40 ವರ್ಷ ಆದವು. ನೀರಿಗೆ, ಗಾಳಿಗೆ ಕೊಳಕು ಸೇರಿಸಿದರೆ ದಂಡ ಹಾಕಬೇಕು, ಜೈಲಿಗೆ ಕಳಿಸಬೇಕು ಅಂತ ಎಲ್ಲ ಕಾನೂನುಗಳು ನಮ್ಮಲ್ಲಿ ಇವೆ. ಏನು ಪ್ರಯೋಜನ? ಈಗ ಎಲ್ಲಿ ನೋಡಿದರೆ ಅಲ್ಲಿ ಮಾಲಿನ್ಯದ ಹೊಳೆ ಹರೀತಾ ಇದೆ. ಕೊಳೆ ಮಾಡೋರು ಕೊಳೆ ಮಾಡ್ತಾನೇ ಇದ್ದಾರೆ.

**ಮಗು:** ಗಾಂಧೀಜಿ ಈಗ ಇದ್ದಿದ್ರೆ ಏನ್ ಮಾಡ್ತಾ ಇದ್ರು? ಉಪವಾಸ ಕೂರ್ತಾ ಇದ್ರಾ?

**ಅವನು:** ಉಪವಾಸ ಕೂರ್ತಾ ಇದ್ರೊ ಅಥವಾ ಯಾರದೋ ದರಿದ್ರ ನಾರಾಯಣನ ಮನೆಯ ಕಕ್ಕಸು ತೊಳೀತಾ ಇರುತ್ತಿದ್ರೇನೊ. ನಮ್ಮ ಯಾವ ಸುದ್ದಿ ಚಾನೆಲ್ಲೂ ಕ್ಯಾರೇ ಅನ್ತಾ ಇರಲಿಲ್ಲವೇನೊ. ಬಾಪೂಜಿ ತಮ್ಮ ಜೀವನದ ಉದ್ದಕ್ಕೂ – ಅಂದ್ರೆ ದಕ್ಷಿಣ ಆಫ್ರಿಕದಿಂದ ಬಂದ ಲಾಗಾಯ್ತೂ ಕಕ್ಕಸನ್ನು ಅವರೇ ಕ್ಲೀನ್ ಮಾಡ್ತಾ ಇದ್ರು; ಆಶ್ರಮದ ಸುತ್ತ ಅವರೇ ಪೊರಕೆ ಹಿಡಿದು ಬೀದಿ ಗುಡಿಸ್ತಾ ಇದ್ರು. ಪ್ರಾರ್ಥನಾ ಸಭೇಲಿ ಅದರ ಬಗ್ಗೆ ಹೇಳ್ತಾನೇ ಇದ್ರು... ಬರೀತಾ ಇದ್ರು; 1925ರಲ್ಲಿ 'ನವಜೀವನ' ಅನ್ನೋ ಪತ್ರಿಕೇಲಿ ಏನು ಬರೆದಿದ್ರು ಹೇಳಲಾ?

**ಅವಳು:** ಹೇಳಿ.

**ಅವನು:** (ಗಂಟಲು ಸರಿಪಡಿಸಿಕೊಂಡು) 'ನಮ್ಮ ದೇಶದ ಜನರಿಗೆ ಬರುವ ಬಹಳಷ್ಟು ಕಾಯಿಲೆಗಳು ಶುಚಿತ್ವದ ಅಭಾವದಿಂದಾಗಿಯೇ ಬರ್ತವೆ. ಕಂಡಕಂಡಲ್ಲಿ ಕಕ್ಕಸು ಮಾಡೋದು, ಅಥವಾ ಎಲ್ಲೆಂದರಲ್ಲಿ ಅದನ್ನು ಬಿಸಾಕೋದು ಇದರಿಂದಲೇ ಕಾಲರಾ, ಟೈಫಾಯಿಡ್ ಜ್ವರ ಬರುತ್ತದೆ. ಆದ್ದರಿಂದಲೇ ಶೌಚಕ್ಕೆ ಹೋಗುವ ಸ್ಥಳ ಅತ್ಯಂತ ಚೊಕ್ಕಟ ಇರಬೇಕು. ಅಲ್ಲಿ ಬಳಸುವ ಚೊಂಬು, ಬಕೀಟು, ಪೊರಕೆಯಂಥ ಸಾಧನಗಳೆಲ್ಲ ಅತ್ಯಂತ ಶುಚಿಯಾಗಿ ಇರಬೇಕು' – ಹೀಗೆಂದು ಅವರು ಬರೆದರು. ಪದೇ ಪದೇ ಈ ಮಾತನ್ನು ಹೇಳ್ತಾ ಇದ್ದರು, ಅದರ ಬಗ್ಗೆ ಬರೀತಾ ಇದ್ರು. 1937ರಲ್ಲಿ 'ಹರಿಜನ' ಪತ್ರಿಕೆಯಲ್ಲೂ ಅದನ್ನೇ ಒತ್ತಿ ಹೇಳಿದರು. 'ಆದರ್ಶ ಗ್ರಾಮ' ಹೇಗಿರಬೇಕು ಅಂದರೆ ಶೌಚದ್ರವ್ಯದ ವಿಲೇವಾರಿಗೆ ಸೂಕ್ತ ವ್ಯವಸ್ಥೆ ಕಡ್ಡಾಯ ಇರಬೇಕು; ಗ್ರಾಮೋದ್ಧಾರಕ್ಕೆ ಹೋಗುವ ಪ್ರತಿಯೊಬ್ಬ ಸ್ವಯಂಸೇವಕನೂ ಇದರ ಬಗ್ಗೆ ಊರಿನ ಜನರಲ್ಲಿ ಜಾಗ್ರತಿ ಮೂಡಿಸಬೇಕು; ತಾನಾಗಿ ಬೀದಿ ಗುಡಿಸಬೇಕು, ಕಕ್ಕಸನ್ನು ದೂರ ಸಾಗಿಸಿ ಅದರಿಂದ ಉತ್ತಮ ಗೊಬ್ಬರ ತಯಾರಿಸಿ ತೋರಿಸಬೇಕು ಅಂತ 'ಹರಿಜನ' ಪತ್ರಿಕೆಯಲ್ಲಿ ಬರೆದಿದ್ದರು. ಜೈಲಿನಿಂದ ಹೊರಬಂದು ಎಲ್ಲೆಲ್ಲಿ ಆಶ್ರಮ ಸ್ಥಾಪಿಸಿದರೋ ಅಲ್ಲೆಲ್ಲ ಅಂದರೆ ವರ್ಧಾ